अहर्निशं जागरणीयम् लोकहितं मम करणीयम्

# ಪುಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ



ಕಾಸರಗೋಡಿನ ಬಾಯಾರು ಮಂಡಲದ ಸ್ವಯಂಸೇವಕರು ಸಾಂಘಿಕ್‌ನ ನಂತರ ಗ್ರಾಮ ದೇವಸ್ಥಾನದ ಪರಿಸರವನ್ನು ಸ್ವಚ್ಛಗೊಳಿಸಿದರು

ಸಂಪುಟ : 36 ಸಂಚಿಕೆ : 20 ಮನ್ಮಥ–ವರ್ಷ ಕಲಿಯುಗಾಬ್ದ 5117 1–6–2015 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4

# ನೆಲಕ್ಕೆ ನೀರಿಂಗಿಸಲು ನೂರಾರು ದಾರಿಗಳು

ಪೃಥ್ವಿಯ ಮುಕ್ಕಾಲು ಪಾಲು ಜಲವಿದ್ದರೂ ಸಮಗ್ರ ಜೀವಸಂಕುಲ ನೀರಿಗಾಗಿ ಆಶ್ರಯಿಸಿದ್ದು ಮಳೆಯನ್ನೇ. ಸಮುದ್ರ, ನದಿಕೆರೆಗಳ ನೀರು ಆವಿಯಾಗಿ ಮತ್ತೆ ಮಳೆಯಾಗಿ ಭೂಮಿಯ ಮೇಲೆ ಸುರಿದು, ನದಿಗಳಲ್ಲಿ ಹರಿದು, ಕೆರೆ ಬಾವಿಗಳನ್ನು ತುಂಬಿಸಿ ಮಣ್ಣಿನಲ್ಲಿ ಇಳಿದು ಅಂತರ್ಜಲಕ್ಕೆ ಮರುಪೂರಣೆಯಾಗುವ ಜಲಚಕ್ರದ ವ್ಯವಸ್ಥೆ ಜೀವಕೋಟಿಯ ನೀರಿನ ಆವಶ್ಯಕತೆಯನ್ನು ಪೂರೈಸುತ್ತಿತ್ತು. ಈ ಪ್ರಾಕೃತಿಕ ವ್ಯವಸ್ಥೆಯನ್ನು ಅರಿತಿದ್ದ ನಮ್ಮ ಪೂರ್ವಜರು ಅದಕ್ಕೆ ತಕ್ಕಂತೆ ಜಲಸಂರಕ್ಷಣೆ ಮತ್ತು ಬಳಕೆಯ ವಿಧಾನಗಳನ್ನು ವಿಕಸನಗೊಳಿಸಿದ್ದರು. ಮಳೆಯ ನೀರು ಸಂಗ್ರಹಣಾ (ಕ್ಯಾಚ್‌ಮೆಂಟ್) ಪ್ರದೇಶಗಳಿಂದ ಒಟ್ಟಾಗಿ ಹಳ್ಳ ಕೋಡಿಗಳಲ್ಲಿ ಹರಿದು ಕೆರೆಕಟ್ಟೆಗಳನ್ನು ತುಂಬಿಸುವುದು. ಹೀಗೆ ಸಂಗ್ರಹವಾದ ನೀರಿನಿಂದಾಗಿ ಕೆರೆಯ ಕೆಳಗಿನ ಪ್ರದೇಶದ ಹೊಲಗಳ ಬಾವಿ ಹಾಗೂ ಕಲ್ಯಾಣಿಗಳಲ್ಲಿ ಸದಾ ನೀರಿರುತ್ತಿದ್ದು, ಕೃಷಿಗೆ, ದನಕರುಗಳು ಕುಡಿಯಲು ಹಾಗೂ ಗೃಹಕಾರ್ಯಗಳಿಗೆ ಬಳಕೆಯಾಗುತ್ತಿದ್ದವು. ಹಾಗೆಯೇ ಹೊಲ ತೋಟಗಳಲ್ಲೂ ಒಂದು ಗುಂಡಿ ಇರುತ್ತಿತ್ತು. ಮಳೆ ಬಂದಾಗ ಇವುಗಳಲ್ಲಿ ಶೇಖರವಾಗುವ ನೀರು ತರಕಾರಿ ಬೆಳೆಯಲು, ದನಗಳ ಮೈತೊಳೆಸಲು ಹೀಗೆ ವಿಧವಿಧವಾಗಿ ಬಳಕೆಯಾಗುವುದರ ಜೊತೆಗೆ ನಿಧಾನವಾಗಿ ನೆಲದಲ್ಲಿಯೂ ಇಂಗುತ್ತಿತ್ತು.



ಹೊಲದ ಮಧ್ಯದಲ್ಲಿರುವ ಕಲ್ಯಾಣಿ



ನೀರಿಂಗಿಸುವ ಹೊಂಡಗಳು

ಆದರೆ ಇಂದು ಪ್ರಗತಿಯ ಹೆಸರಿನಲ್ಲಿ ನಡೆಯುತ್ತಿರುವ ವಿವೇಚನಾರಹಿತ ಸಂಪನ್ಮೂಲಗಳ ಬಳಕೆ, ನದಿ ಪಾತ್ರದ ಜಲಸಂಗ್ರಹಣಾ ಪ್ರದೇಶದಲ್ಲಿನ ಚಟುವಟಿಕೆಗಳು, ಕೆರೆಗಳ ಒತ್ತುವರಿ ಹಾಗೂ ನಿರ್ವಹಣೆಯ ಕೊರತೆ, ಅತಿಯಾಗಿ ಕೊಳವೆ ಬಾವಿಗಳನ್ನು ಕೊರೆಯುವುದು, ಕಾಡಿನ ನಾಶ ಮೊದಲಾದವುಗಳಿಂದ ಸಾಂಪ್ರದಾಯಿಕ ಜಲಮೂಲಗಳು ಬತ್ತಿಹೋಗುತ್ತಿವೆ. ಇದು ಒಂದೆರಡು ಊರುಗಳ ಸಮಸ್ಯೆಯಲ್ಲ. ಈ ಹಿನ್ನೆಲೆಯಲ್ಲಿ ಜಲಕ್ಷಾಮದ ಸಮಸ್ಯೆಯ ಗಂಭೀರತೆಯ ಪ್ರಜ್ಞೆ ಬೆಳೆದಿದ್ದರಿಂದ ಅನೇಕ ಪ್ರದೇಶಗಳಲ್ಲಿ ಮಳೆ ನೀರಿನ ಸಂಗ್ರಹ, ನೀರಿಂಗಿಸುವುದು ಕಾಡನ್ನು ಬೆಳೆಸುವುದು ಹೀಗೆ ಅನೇಕ ರೀತಿಯ ಜಲಸಂವರ್ಧನೆ ಕಾರ್ಯಗಳು ನಡೆಯುತ್ತಿರುವುದು ಸಮಾಧಾನಕರ ಸಂಗತಿ. ಬತ್ತಿಹೋಗಿರುವ ಕುಮುದ್ವತಿ ನದಿ ಪಾತ್ರದ ಹಳ್ಳಿಗಳಾದ ನೆಲಮಂಗಲ ತಾಲೂಕಿನ ಕಾಸರಘಟ್ಟ, ಮಹಿಮಾಪುರ, ಕೆರೆಕತ್ತಿಗನೂರು, ಆಲದಹಳ್ಳಿ ಮತ್ತು ಸುತ್ತಲಿನ ಹಳ್ಳಿಗಳಲ್ಲಿ ನದಿ ಪುನಶ್ಚೇತನ, ಕೆರೆ ಕಲ್ಯಾಣಿ ಮುಂತಾದ ಜಲಮೂಲಗಳ ಸಂರಕ್ಷಣೆಯ ಕಾರ್ಯ ಕಳೆದ ಕೆಲವು ವರ್ಷಗಳಿಂದ ನಡೆಯುತ್ತಿದ್ದು ಉತ್ತಮ ಪರಿಣಾಮ ಕಂಡುಬಂದಿದೆ. ಭಾರತೀಯ ಕಿಸಾನ್ ಸಂಘದ ಸ್ಥಳೀಯ ಕಾರ್ಯಕರ್ತರು ಗ್ರಾಮಸ್ಥರನ್ನು ಜೊತೆಗೂಡಿಸಿ ಕೆಲವು ಸಂಘಸಂಸ್ಥೆಗಳ ನೆರವಿನಿಂದ ಮಾದರಿ ಕಾರ್ಯವನ್ನು ನಡೆಸುತ್ತಿದ್ದಾರೆ.

ನೆಲಮಂಗಲ ತಾಲೂಕಿನ ಕೆರೆಕತ್ತಿಗನೂರು ಗ್ರಾಮದ ನಿವಾಸಿ ಪ್ರಗತಿಪರ ರೈತ, ಸಿಐಎಸ್‌ಎಫ್‌ನಲ್ಲಿ ಸೇವೆ ಸಲ್ಲಿಸಿದ ಮಾಜಿ ಯೋಧ ಗಂಗಣ್ಣನವರ ಪ್ರಕೃತಿ ಪ್ರೇಮ ಮತ್ತು ಅನುಭವ ಜ್ಞಾನ ವಿಸ್ಮಯವನ್ನು ಮೂಡಿಸುವಂತಹುದು. ತಮ್ಮ ಹಳ್ಳಿಯ ಸುತ್ತಲಿನ ಗುಡ್ಡಗಾಡಿನಲ್ಲಿ ಬೆಳೆಯುವ ಮರಗಳಿಂದ ಹಿಡಿದು ಸಣ್ಣ ಪೊದೆ–ಗಿಡಗಳು, ಬಳ್ಳಿ ಮೂಲಿಕೆಗಳು ಮತ್ತು ಅವುಗಳ ಔಷಧೀಯ ಗುಣಗಳನ್ನು ಆಳವಾಗಿ ತಿಳಿದುಕೊಂಡಿರುವ ಗಂಗಣ್ಣನವರು, ನೆಟ್ಟ ಪ್ರತಿಯೊಂದು ಗಿಡವನ್ನು ವಾತ್ಸಲ್ಯದಿಂದ ಆರೈಕೆ ಮಾಡಿ ಬೆಳೆಸುತ್ತಿದ್ದಾರೆ. ಅಂತರ್ಜಲದ ಕುರಿತು ಅವರು ಹೇಳುವ ಮಾತು ತುಂಬ ಪ್ರಸ್ತುತವಾಗಿದೆ. "ಅಂತರ್ಜಲ ಆಪತ್ಕಾಲದ ನಿಧಿ. ಆದ್ದರಿಂದ ಅತೀ ಅಗತ್ಯಬಿದ್ದಾಗ ಮಾತ್ರ ಬೋರ್‌ವೆಲ್ ಅಗೆದು ಅದನ್ನು ಬಳಸಬೇಕು. ಇಂದು ಭೂಮಿಯ ಮೇಲ್ಪದರದಿಂದ ಮೂವತ್ತು ನಲವತ್ತು ಅಡಿ ಅಗೆದರೂ ತೇವಾಂಶ ಇರುವುದಿಲ್ಲ. ಹೀಗಾದರೆ ಗಿಡಮರಗಳು ಹೇಗೆ ಬದುಕಬಲ್ಲವು? ಆದ್ದರಿಂದ ಮೊದಲು ಭೂಮಿಯ ಮೇಲ್ಪದರದಲ್ಲಿ ನೀರನ್ನು ಇಂಗಿಸಿದರೆ ಅಂತರ್ಜಲ ತನ್ನಿಂದ ತಾನೇ ಪೂರಣವಾಗುತ್ತದೆ. ಭೂಮಿಯ ಆಳಕ್ಕೆ ಇಳಿಯುವ ಮರದ ಬೇರುಗಳು ನೀರನ್ನು ಇಂಗಿಸುವ ಕಾರ್ಯವನ್ನು ತಾವೇ ಮಾಡುತ್ತವೆ."



## ಮರಗಿಡಗಳನ್ನು ಬೆಳೆಸುವ ಯೋಜನೆ

ಮಳೆ, ಅಂತರ್ಜಲ ಹಾಗೂ ಮರಗಳಿಗೆ ತುಂಬ ಹತ್ತಿರದ ಸಂಬಂಧವಿದೆ. ಮರಗಳು ಮೋಡಗಳನ್ನು ತಡೆದು ವಾತಾವರಣವನ್ನು ತಂಪಾಗಿಸಿ ಮಳೆಸುರಿಸುವುದು ಒಂದಾದರೆ, ನೆಲದ ಆಳಕ್ಕೆ ಇಳಿಯುವ ಮರದ ಬೇರುಗಳು ನೀರು ಇಂಗಲು ಸಹಕಾರಿಯಾಗಿವೆ. ಇದನ್ನು ಅರಿತು ಮಹಿಮಾಪುರ, ಆಲದಹಳ್ಳಿ ಮತ್ತು ಸುತ್ತಲಿನ ಹಳ್ಳಿಗಳ ಗುಡ್ಡಗಾಡು ಪ್ರದೇಶದಲ್ಲಿ ದೊಡ್ಡಪ್ರಮಾಣದಲ್ಲಿ ಕಾಡನ್ನು ಬೆಳೆಸುವ ಕಾರ್ಯವನ್ನು ಕೈಗೊಳ್ಳಲಾಗಿದೆ. ಮಹಿಮಾಪುರ ಗ್ರಾಮದ ಜಾತ್ರಾ ಮೈದಾನ, ಗುಂಡುತೋಪುಗಳಲ್ಲಿ ಗ್ರಾಮಸ್ಥರೇ ಸೇರಿ ಅತ್ತಿ, ಮಾವು, ನೇರಳೆ, ಹಿಪ್ಪಲಿ, ಆಲ, ಹಲಸು, ಸೀತಾಫಲ ಮುಂತಾದ ವಿವಿಧ ಜಾತಿಯ ಮರಗಳನ್ನು ಬೆಳೆಸುತ್ತಿದ್ದಾರೆ. ಬೇಸಿಗೆಯಲ್ಲಿ ಟ್ಯಾಂಕರ್‌ಗಳ ಮೂಲಕ ಗಿಡಗಳಿಗೆ ನೀರುಣಿಸಿ ಆರೈಕೆ ಮಾಡುತ್ತಿದ್ದಾರೆ. ಹೊಸದಾಗಿ ಕಾಡುಬೆಳಸುವುದರ ಜೊತೆಗೆ ಗುಂಡುತೋಪಿನ ಮರಗಳನ್ನು ಕಾಪಾಡುವುದಕ್ಕೂ ಆದ್ಯತೆ ನೀಡಿದ್ದಾರೆ. ಬೆಂಗಳೂರು ಮುಂತಾದ ನಗರ ಪ್ರದೇಶದ ಕೆಲವು ಸ್ವಯಂಸೇವಕರು ಹಾಗೂ ಸಂಘಟನೆಗಳು ಗ್ರಾಮಸ್ಥರ ಜೊತೆಗೆ ಗಿಡನೆಡುವ ಕಾರ್ಯದಲ್ಲಿ ಕೈಜೋಡಿಸಿದ್ದಾರೆ.

## ಸೀಡ್ ಬಾಲ್‌ಗಳು ಮತ್ತು ಬೀಜ ಎರಚುವುದು

'ಸೀಡ್ ಬಾಲ್' ಗಿಡಬೆಳೆಸುವ ಒಂದು ವಿಶಿಷ್ಟ ಹಾಗೂ ಸರಳ ವಿಧಾನ. ಮಣ್ಣಿನೊಂದಿಗೆ ದನದ ಸಗಣಿಯನ್ನು ಬೆರೆಸಿ ಉಂಡೆಕಟ್ಟುವ ಮಟ್ಟಿಗೆ ಹದಮಾಡಿಕೊಳ್ಳುವುದು. ಬೀಜಗಳನ್ನು ಹಾಕಿ ಮಣ್ಣಿನ ಉಂಡೆ (ಸೀಡ್‌ಬಾಲ್)ಗಳನ್ನು ಕಟ್ಟಿ ನೆರಳಿನಲ್ಲಿ ಒಣಗಿಸಿ ಸಂಗ್ರಹಿಸಿಟ್ಟುಕೊಳ್ಳುವುದು. ಮಳೆಗಾಲದ ಸಂದರ್ಭದಲ್ಲಿ ಪೊದೆಗಳ ಮಧ್ಯೆ, ಒಣಗಿ ಕಿತ್ತಿರುವ ಮರದ ಬುಡದಲ್ಲಿ, ಸಣ್ಣ ಸಣ್ಣ ಹೊಂಡಗಳಲ್ಲಿ, ವ್ಯರ್ಥವಾಗಿ ಸುಮ್ಮನೆ ಬಿದ್ದಿರುವ ಪ್ರದೇಶಗಳಲ್ಲಿ – ಹೀಗೆ ಇಂತಹ ಬೀಜ ಉಂಡೆಗಳನ್ನು ಬಿಸಾಡುವುದು. ತೇವಾಂಶ ಸಿಕ್ಕಾಗ ಉಂಡೆಯೊಳಗಿನ ಬೀಜವು ಮೊಳಕೆಯೊಡೆದು ಅಲ್ಲೇ ಬೇರು ಬಿಟ್ಟು ಗಿಡವಾಗುವುದು. ಇದು ಶಾಲಾ ಮಕ್ಕಳೂ ಆಟವಾಡುತ್ತ ಮಾಡುವ ಕೆಲಸ. ಹಾಗೆಯೇ ವಿವಿಧ ರೀತಿಯ ತರಕಾರಿ ಗಿಡಗಳು ಹಾಗೂ ಬಳ್ಳಿಗಳ ಬೀಜಗಳನ್ನು ಸಂಗ್ರಹಿಸಿ ಹದವಾದ ಮಣ್ಣಿರುವ ಕಡೆ, ಬಂಡೆಗಳ ನಡುವೆ ಹೀಗೆ ಸುಮ್ಮನೆ ಎರಚುವುದು. ಮಳೆಗಾಲದ ತೇವಾಂಶ ತಾಕಿದೊಡನೆ ಅವು ಮೊಳಕೆಯೊಡೆದು ಅಲ್ಲಿಯೇ ಬೆಳೆಯುತ್ತವೆ. ಹೀಗೆ ಬೀಜ ಎರಚುವುದರಿಂದ ಹುಟ್ಟಿಕೊಂಡು ಬೆಳೆದಿರುವ ಬಳ್ಳಿಗಳು, ಗಿಡಗಳು, ಸೊಪ್ಪಿನ ಹಾಗೂ ತರಕಾರಿ ಸಸ್ಯಗಳು ಮಹಿಮಾಪುರದ ಮಹಿಮಾರಂಗ ಸ್ವಾಮಿ ದೇವಸ್ಥಾನ ಸುತ್ತಲಿನ ಪ್ರದೇಶದಲ್ಲಿ ಹುಲುಸಾಗಿ ಬೆಳೆದಿವೆ.

(2ನೇ ಪುಟಕ್ಕೆ)



ಕಾಸರಘಟ್ಟ ಕೆರೆ

ಸಮರ್ಥ ಭಾರತ
ಒಂದು ಗುರಿ - ಹಲವು ದಾರಿ

# ಸಕ್ಷಮ – ವಿಶಿಷ್ಟಚೇತನರ ಕಲ್ಯಾಣ

ದೇಹ, ಮನಸ್ಸು ಮತ್ತು ಬುದ್ಧಿ ಎಲ್ಲವೂ ಸರಿಯಿದ್ದವರಿಗೇ ಜೀವನ ನಿರ್ವಹಣೆಯಲ್ಲಿ ನೂರಾರು ಸವಾಲುಗಳು ಎದುರಾಗುತ್ತವೆ. ಇನ್ನು ಇವುಗಳಲ್ಲಿ ನ್ಯೂನತೆಯಿರುವವರಿಗೆ ಜೀವನ ನಿರ್ವಹಣೆಯಲ್ಲಿ ಎಷ್ಟೊಂದು ಸವಾಲುಗಳಿರಬಹುದು? ಹೆಚ್ಚಿನ ಬಾರಿ ಇಂತಹವರ ಬಗ್ಗೆ ಯೋಚಿಸುವುದೂ ಇಲ್ಲ, ಕನಿಷ್ಠ ಸಂವೇದನೆಯನ್ನೂ ತೋರಿಸುವುದಿಲ್ಲ ನಮ್ಮ ಸಮಾಜ. ಅಂಗವೈಕಲ್ಯವುಳ್ಳ, ಕಿವಿ ಕೇಳದ, ಮಾತು ಬಾರದ ಅಥವಾ ಕಣ್ಣು ಕಾಣದ ಅನೇಕರು ತಮ್ಮ ಈ ಎಲ್ಲ ಸವಾಲುಗಳ ನಡುವೆಯೂ ಸಾಮಾನ್ಯರಿಗಿಂತಲೂ ಅಧಿಕ ಸಾಧನೆ ಮಾಡಿ ತೋರಿದವರಿದ್ದಾರೆ. ತಮ್ಮ ಸವಾಲುಗಳ ಕಾರಣದಿಂದ ಎಲ್ಲರಿಂದ ನಿರ್ಲಕ್ಷ್ಯಕ್ಕೊಳಗಾಗಿ ಸಮಾಜದ ಮುಖ್ಯವಾಹಿನಿಯಿಂದ ಇಂತಹವರು ದೂರವಾಗುವ ಸಂಭವವೇ ಹೆಚ್ಚು. ಇಂತಹ ಶಾರೀರಿಕ, ಬೌದ್ಧಿಕ ಸವಾಲುಗಳುಳ್ಳವರಿಗೆ ಸ್ವಾವಲಂಬೀ ಬದುಕನ್ನು ನಡೆಸಲು ನೆರವಾಗುವ, ಅವರನ್ನು ಸಂಘಟಿಸುವ, ಸಮಾಜದಲ್ಲಿ ಅವರ ಬಗ್ಗೆ ಸಂವೇದನೆಯನ್ನು ಜಾಗೃತಗೊಳಿಸುವ ಅಗತ್ಯವಿದೆ.

## ಚಟುವಟಿಕೆಯ ಬಗ್ಗೆ

ಶಾರೀರಿಕ ಮತ್ತು ಬೌದ್ಧಿಕ ಸವಾಲುಳ್ಳವರಿಗಾಗಿಯೇ ಶಿಕ್ಷಣ ಕೇಂದ್ರಗಳು, ವಿದ್ಯಾರ್ಥಿನಿಲಯಗಳು, ಧ್ವನಿಪುಸ್ತಕ ತಯಾರಿಕಾ ಘಟಕಗಳು, ಬ್ರೈಲ್ ಪುಸ್ತಕ ಮುದ್ರಣ ಕೇಂದ್ರಗಳು, ಉದ್ಯೋಗ ತರಬೇತಿಗಳನ್ನು ನಡೆಸುತ್ತಿದೆ ಸಕ್ಷಮ ಸಂಘಟನೆ. ಅಖಿಲ ಭಾರತ ವ್ಯಾಪ್ತಿಯುಳ್ಳ ಸಕ್ಷಮ (ಸಮದೃಷ್ಟಿ ಕ್ಷಮತಾ ವಿಕಾಸ ಮತ್ತು ಅನುಸಂಧಾನ ಮಂಡಲ) ದೇಶಾದ್ಯಂತ ವಿಚಾರ ಸಂಕಿರಣಗಳ ಆಯೋಜನೆ, ಭಜನಾ ಮಂಡಳಿ, ರಾಮಾಯಣ ಕೀರ್ತನ ಮಂಡಳಿಗಳನ್ನೂ ನಡೆಸುತ್ತಿದೆ. ಆಯುರ್ವೇದ ಔಷಧಿ ತಯಾರಿಕೆ ಘಟಕ, ಸಾಬೂನು ಮತ್ತು ಅಗರಬತ್ತಿ ತಯಾರಿಕಾ ಘಟಕಗಳನ್ನೂ ನಡೆಸುತ್ತಿದೆ. ಇದಕ್ಕಾಗಿ ತರಬೇತಿಯನ್ನೂ ನೀಡುತ್ತಿದೆ. ನೇತ್ರದಾನದ ಬಗ್ಗೆ ಜಾಗೃತಿ, ಉಚಿತ ಆರೋಗ್ಯ ತಪಾಸಣೆ ಅಷ್ಟೇ ಅಲ್ಲದೇ ದೇಶಾದ್ಯಂತ 31 ನೇತ್ರಬ್ಯಾಂಕ್‌ಗಳನ್ನೂ ಸಕ್ಷಮ ನಿರ್ವಹಿಸುತ್ತಿದೆ.

ನಮ್ಮ ಕರ್ನಾಟಕದಲ್ಲಿಯೇ, ಇನ್ನೂ ಅನೇಕ ಸಂಸ್ಥೆಗಳು ಶಾರೀರಿಕ ಮತ್ತು ಬೌದ್ಧಿಕ ಸವಾಲುಗಳುಳ್ಳ ಮಕ್ಕಳಿಗೆ ವಿಶೇಷ ಶಿಕ್ಷಣ ನೀಡುತ್ತಿವೆ.

- ಬೆಂಗಳೂರಿನ ಅರುಣಚೇತನ ಮತ್ತು ಮನೋನಂದನ ಶಾಲೆಗಳು ಬುದ್ಧಿಮಾಂದ್ಯ ಮತ್ತು ಅಂಗವಿಕಲ ಮಕ್ಕಳಿಗೆ ವಿಶೇಷ ಶಿಕ್ಷಣದ ಜತೆಗೇ, ಸ್ವಾವಲಂಬೀ ಜೀವನ ನಡೆಸಲು ಬೇಕಾದ ವೃತ್ತಿ ತರಬೇತಿಯನ್ನೂ ನೀಡುತ್ತಿವೆ.
- ಮಂಗಳೂರಿನ ಚೇತನ ಶಾಲೆ (ಬುದ್ಧಿಮಾಂದ್ಯ ಮಕ್ಕಳಿಗಾಗಿ), ಸಾನ್ನಿಧ್ಯ ವಸತಿ ಶಾಲೆ, ಮಂಗಳ ಜ್ಯೋತಿ ಕಿವುಡ ಮತ್ತು ಮೂಗ ಮಕ್ಕಳ ಶಾಲೆ ಹಾಗೂ ರೋಮನ್ ಅಂಡ್ ಕ್ಯಾಥರಿನ್ ಲೋಬೋ ಅಂಧ ಮಕ್ಕಳ ಶಾಲೆ
- ಉತ್ತರ ಕನ್ನಡ ಜಿಲ್ಲೆಯ ಶಿರಸಿಯ ಅಜಿತ ಮನೋಚೇತನ
- ಚಿಕ್ಕಮಗಳೂರು ಜಿಲ್ಲೆಯ ಕೊಪ್ಪದ ನವಚೇತನ ಶಾಲೆ

## ನಾವೇನು ಮಾಡಬಹುದು?

- ಅಂಗವಿಕಲರನ್ನು ಗುರುತಿಸುವುದು, ಅವರಿಗೆ ಅರ್ಹತಾ ಪತ್ರ ಪಡೆಯಲು ಸಹಾಯ ಮಾಡುವುದು. ಜಿಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಈ ಅರ್ಹತಾ ಪತ್ರ ಪಡೆಯಬಹುದು.
- ಅಂಧ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಸಹಾಯ (ಸ್ಕ್ರೈಬ್)
- ಅಂಧ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳನ್ನು ಓದಿ ಹೇಳುವುದು.
- ಅಂಗವಿಕಲರಿಗೆ ಬೇಕಾದ ಉಪಕರಣಗಳಿಗಾಗಿ (ಕ್ಯಾಲಿಪರ್ಸ್, ಶ್ರವಣಸಾಧನ, ಟ್ರೈಸಿಕಲ್, ಕೃತಕ ಕಾಲು) ಧನಸಹಾಯ ಮಾಡಲು ಸಂಸದರು ಮತ್ತು ಶಾಸಕರು ತಮ್ಮ ಅನುದಾನದಲ್ಲಿ ರೂ. 10 ಲಕ್ಷದಷ್ಟು ಹಣವನ್ನು ನೀಡಲು ಅವಕಾಶವಿದೆ. ಹಾಗೆಯೇ ಪ್ರತಿ ಗ್ರಾಮ ಪಂಚಾಯತಿಯ ಅನುದಾನದಲ್ಲಿ ಶೇ. 3ರಷ್ಟು ಈ ವಿಷಯಕ್ಕೆ ಬಳಸಲು ಅವಕಾಶವಿದೆ. ಆದರೆ, ಇದರ ಬಗ್ಗೆ ಹೆಚ್ಚು ಜನರಿಗೆ ತಿಳುವಳಿಕೆಯಿಲ್ಲದ ಕಾರಣ ಅದರ ಸದುಪಯೋಗವಾಗುತ್ತಿಲ್ಲ. ಈ ಸಹಾಯಧನವನ್ನು ಪಡೆಯಲು ಅಂಗವಿಕಲರಿಗೆ ಸಹಾಯ ಮಾಡಬಹುದು.
- ವಿಶೇಷ ಉಪಕರಣಗಳನ್ನು ಖರೀದಿಸಲು ದಾನಿಗಳಿಂದ ಹಣ ಹೊಂದಿಸುವುದು.
- ಸರ್ಕಾರದಿಂದ ಸಿಗುವ ವಿದ್ಯಾರ್ಥಿವೇತನಕ್ಕೆ ಮತ್ತು ಮಾಸಾಶನಕ್ಕೆ ಬೇಕಾದ ದಾಖಲೆಗಳನ್ನು ತಯಾರುಮಾಡುವುದು ಹಾಗೂ ಅಂಗವಿಕಲರನ್ನು ಸಂಬಂಧಪಟ್ಟ ಇಲಾಖೆಯ ಕಚೇರಿಗಳಿಗೆ ಕರೆದುಕೊಂಡು ಹೋಗುವುದು.
- ಅಂಗವಿಕಲರಿಗಾಗಿ ಸ್ವಸಹಾಯ ಸಂಘಗಳನ್ನು ನಡೆಸುವುದು.
- ಪ್ರಧಾನಮಂತ್ರಿ ಜನಧನ ಯೋಜನೆ, ಜೀವವಿಮಾ ಯೋಜನೆಗಳಿಗೆ ನೋಂದಣಿ ಮಾಡಿಸಲು ಸಹಾಯ ಮಾಡುವುದು.
- ಅಂಧ ವಿದ್ಯಾರ್ಥಿಗಳಿಗಾಗಿ ಆಡಿಯೋ ಪುಸ್ತಕಗಳನ್ನು (ಪುಸ್ತಕಗಳನ್ನು ಓದಿ ಧ್ವನಿಮುದ್ರಣ ಮಾಡುವುದು) ತಯಾರು ಮಾಡುವುದು.
- ಶಾಲೆ, ಕಾಲೇಜುಗಳ ಪುಸ್ತಕಗಳನ್ನು ಇ–ಪುಸ್ತಕರೂಪದಲ್ಲಿ ಅಂತರ್ಜಾಲದಲ್ಲಿ ಪ್ರಕಟಿಸುವುದು (ಪುಸ್ತಕಗಳನ್ನು ಸ್ಕ್ಯಾನ್ ಮಾಡಿ ಒಸಿಆರ್ ರೂಪದಲ್ಲಿ ಪ್ರಕಟಿಸಿದಲ್ಲಿ ಅಂಧರಿಗಾಗಿಯೇ ಇರುವ ಸಾಫ್ಟ್‌ವೇರ್ ಅದನ್ನು ಧ್ವನಿರೂಪದಲ್ಲಿ ಓದಿ ಹೇಳಬಲ್ಲದು).
- ಅನೇಕರು ಇಂತಹ ಮಕ್ಕಳನ್ನು ಶಾಲೆಗೆ ಸೇರಿಸುವುದಿಲ್ಲ. ಪಾಲಕರೊಂದಿಗೆ ಮಾತನಾಡಿ ಶಾಲೆಗೆ ಸೇರಿಸಲು ಮನವೊಲಿಸುವುದು.

ವಿಶಿಷ್ಟಚೇತನರಿಗೆ ನಮ್ಮ ಅನುಕಂಪ ಸಾಲದು. ಅವಕಾಶಗಳನ್ನು ಬಳಸಿಕೊಳ್ಳಲು ನಮ್ಮ ಸ್ನೇಹಹಸ್ತ ಬೇಕಾಗಿದೆ. ಆಗ, ತಾವೂ ಯಾರಿಗೇನು ಕಡಿಮೆಯಿಲ್ಲ ಎಂಬುದನ್ನು ಅವರು ತೋರಿಸಬಲ್ಲರು.

**ಸಂಪರ್ಕ:**
ವಿನೋದ್ ಪ್ರಕಾಶ್ (ಸಕ್ಷಮ) – 99866 99710
ಗಾಯತ್ರಿ (ಅರುಣಚೇತನ, ಬೆಂಗಳೂರು) – 97415 98443
ನಾರಾಯಣ (ನವಚೇತನ, ಕೊಪ್ಪ) – 94490 11763
ಅನಂತ ಹೆಗಡೆ ಆಶೀಸರ – 94811 35153
(ಅಜಿತ ಮನೋಚೇತನ, ಶಿರಸಿ)
ವಿನೋದ್ ಶೆಣೈ (ಮಂಗಳೂರು) – 98805 43918

(1ನೇ ಪುಟದಿಂದ)

# ನೆಲಕ್ಕೆ ನೀರಿಂಗಿಸಲು ನೂರಾರು ದಾರಿಗಳು

## ನೀರಿಂಗಿಸುವ ಹೊಂಡಗಳು

ಮಳೆಯ ನೀರನ್ನು ಸಂಗ್ರಹಿಸಿ ಭೂಮಿಯಲ್ಲಿ ಇಂಗಿಸುವ ಸಲುವಾಗಿ ತೋಪಿನಲ್ಲಿ ಅಲ್ಲಲ್ಲಿ ಹೊಂಡಗಳನ್ನು ತೋಡಲಾಗಿದೆ. ಮಹಿಮಾಪುರ ಗ್ರಾಮದ ತೋಪಿನಲ್ಲಿ ಅಗೆಯಲಾದ ಸುಮಾರು 60 ಮಿ. ಅಗಲ 120 ಮೀ ಇಂತಹ ಒಂದು ಹೊಂಡ ಸುಮಾರು ಎರಡು ಲಕ್ಷ ಲೀಟರಿಗೂ ಹೆಚ್ಚು ಮಳೆ ನೀರನ್ನು ಹಿಡಿದಿಟ್ಟುಕೊಳ್ಳಬಹುದು. ಅರ್ಧದಷ್ಟು ಆವಿಯಾದರೂ ಬಹುದೊಡ್ಡ ಪ್ರಮಾಣದಲ್ಲಿ ಹರಿದು ಹೋಗಬಹುದಾಗಿದ್ದ ನೀರು ಅಲ್ಲಿಯೇ ಮಣ್ಣಿನಲ್ಲಿ ಇಂಗಿ ಅಂತರ್ಜಲವನ್ನು ಸೇರುವುದು. ಈ ಇಂಗುಗುಂಡಿಯ ಪರಿಣಾಮದಿಂದಾಗಿ ಅಲ್ಲಿಯೇ ಹತ್ತಿರದಲ್ಲಿನ ಬತ್ತಿಹೋಗಿದ್ದ ಕೊಳವೆ ಬಾವಿಗೆ ಮತ್ತೆ ಜೀವ ಬಂದಿದೆ. ಹೊಂಡದ ಮಣ್ಣಿನ ಮೇಲ್ಪದರದಲ್ಲೂ ತೇವಾಂಶ ಹೆಚ್ಚಾಗಿರುವುದರಿಂದ ಸುತ್ತಲಿನ ಪರಿಸರದಲ್ಲಿ ಮರಗಳು ಮತ್ತು ಪೊದೆಗಳು ಹುಲುಸಾಗಿ ಬೆಳೆದಿವೆ.

ನಿಮ್ಮ ಊರಿನಲ್ಲೂ ಇಂತಹ ಪರಿವರ್ತನೀಯ ಚಟುವಟಿಕೆಗಳು ನಡೆದಿವೆಯೇ? ಪರಿಸರ ಸಂರಕ್ಷಣೆ, ಸಾಮಾಜಿಕ ಜಾಗೃತಿಯ ಪ್ರೇರಣಾದಾಯಿ ಚಟುವಟಿಕೆಗಳನ್ನು ನಮಗೆ ಬರೆದು ಕಳುಹಿಸಿ. ಪುಂಗವದಲ್ಲಿ ಅದನ್ನು ಪ್ರಕಟಿಸುತ್ತೇವೆ.
e-mail: editor.pungava@gmail.com
ವಿಳಾಸ: ಸಂಪಾದಕರು, ಪುಂಗವ, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು – 560 004.

## ಮಳೆನೀರಿನ ಹರಿವಿಗೆ ಅಡ್ಡಲಾಗಿ ಒಡ್ಡು ಕಟ್ಟುವುದು, ಇಂಗುಬಾವಿ

ಮಳೆ ನೀರಿನ ಹರಿವಿಗೆ ಅಲ್ಲಲ್ಲಿ ಸಣ್ಣ ಸಣ್ಣ ಒಡ್ಡುಗಳನ್ನು ಕಟ್ಟುವುದು ಮಣ್ಣಿನಲ್ಲಿ ನೀರಿಂಗಿಸುವ ಇನ್ನೊಂದು ವಿಧಾನ. ಒಡ್ಡುಗಳಲ್ಲಿ ಸಂಗ್ರಹವಾದ ನೀರು ಸುತ್ತಲಿನ ಭೂಮಿಯ ತೇವಾಂಶವನ್ನು ಹೆಚ್ಚಿಸುವುದರಿಂದ ಆ ಪ್ರದೇಶಗಳಲ್ಲಿ ಮರಗಿಡಗಳು ಚೆನ್ನಾಗಿ ಬೆಳೆಯುವವು. ಜೊತೆಗೆ ಆಳಕ್ಕಿಳಿದ ಬೇರುಗಳ ಸಂದಿನಲ್ಲಿ ನೀರು ಭೂಮಿಗೆ ಇಂಗುವುದು. ಒಡ್ಡುಗಳ ಜೊತೆಗೆ ಆಧುನಿಕ ಇಂಗುಬಾವಿಗಳನ್ನೂ ನಿರ್ಮಿಸಲಾಗಿದೆ. ಆದರೆ ಈ ಇಂಗುಬಾವಿಗಳ ನಿರ್ಮಾಣಕ್ಕೆ ವೆಚ್ಚ ಹೆಚ್ಚು ಆದರೆ ಪರಿಣಾಮ ಕಡಿಮೆ ಎನ್ನುವುದು ಕಾರ್ಯಕರ್ತರ ಅನಿಸಿಕೆ.


ಹರಿಯುವ ನೀರಿಗೆ ಅಡ್ಡಲಾಗಿ ಕಟ್ಟಿರುವ ಇಂಗುಬಾವಿ


ನೀರಿಂಗಿಸಿದ್ದರ ಪರಿಣಾಮವಾಗಿ ಬೇಸಿಗೆಯಲ್ಲೂ ಹಸಿರು ಕಾಣುವ ಮಹಿಮಾಪುರ

## ಕಾಸರಘಟ್ಟದ ನೀರು ನಿರ್ವಹಣಾ ಸಹಕಾರಿ ಸಂಘ

ಕಾಸರಘಟ್ಟ ಗ್ರಾಮದಲ್ಲಿ ನೀರು ನಿರ್ವಹಣೆಗಾಗಿಯೇ ಸಹಕಾರಿ ಸಂಘ ಕಳೆದ ಎರಡು ದಶಕಗಳಿಂದ ಕಾರ್ಯನಿರ್ವಹಿಸುತ್ತಿದ್ದು ಸುತ್ತಲಿನ ಕೆರೆಗಳ ನಿರ್ವಹಣೆಯ ಜವಾಬ್ದಾರಿಯನ್ನು ಹೊತ್ತಿದೆ. ಕೆರೆಗಳಲ್ಲಿ ಮೀನು ಸಾಕಲು ವಾರ್ಷಿಕ ಗುತ್ತಿಗೆಯನ್ನು ನೀಡಲಾಗುತ್ತಿದ್ದು ಇದರಿಂದ ಕೆರೆಗಳು ಸ್ವಚ್ಛವಾಗಿರುವುದರ ಜೊತೆಗೆ ಸಂಘವು ಆದಾಯವನ್ನೂ ಗಳಿಸುತ್ತಿದೆ. ಬೇಸಿಗೆ ಪ್ರಾರಂಭಕ್ಕೆ ಮುನ್ನವೇ ಮೀನುಸಾಕಾಣಿಕೆಗಾಗಿ ಕೆರೆಗಳ ಹರಾಜು ನಡೆಸಲಾಗುತ್ತದೆ. ಇದರಿಂದ ಕೆರೆಯಲ್ಲಿ ನೀರಿನ ಸಂರಕ್ಷಣೆಗೆ ಮೀನುಸಾಕಾಣಿಕೆಯ ಹೊಣೆಹೊತ್ತವರು ಕಾಳಜಿ ವಹಿಸುತ್ತಾರೆ. ಗ್ರಾಮಸ್ಥ ಕೃಷಿಕರೇ ಈ ನೀರು ನಿರ್ವಹಣಾ ಸಂಘದ ನಿರ್ದೇಶಕರಾಗಿದ್ದು ಊರಿನವರ ಸಹಕಾರದಿಂದ ಜಲಮೂಲಗಳ ಸಂರಕ್ಷಣೆಯ ಕಾರ್ಯವನ್ನು ಮಾಡುತ್ತಿದೆ. ಜೊತೆಗೆ ಕಾಡು ಬೆಳೆಸುವ ಯೋಜನೆ, ಗ್ರಾಮಸ್ಥರಲ್ಲಿ ನೀರಿನ ಬಳಕೆಯ ಕುರಿತು ಶಿಕ್ಷಣ ನೀಡುವ ಕಾರ್ಯದಲ್ಲೂ ಸಂಘ ತೊಡಗಿಕೊಂಡಿದೆ.




ಇಂದು ಬಹುತೇಕ ಗ್ರಾಮಗಳು ಜಲಕ್ಷಾಮದ ಸಮಸ್ಯೆಯನ್ನು ಎದುರಿಸುತ್ತಿರುವುದಕ್ಕೆ ಕೇವಲ ಮಳೆಯ ಪ್ರಮಾಣದಲ್ಲಿನ ವ್ಯತ್ಯಾಸ ಕಾರಣವಲ್ಲ. ನೀರಿನ ಮೂಲಗಳನ್ನು ಉಳಿಸುವುದರಲ್ಲಿನ ಉದಾಸೀನತೆ ಹಾಗೂ ವಿವೇಚನಾರಹಿತ ಬಳಕೆ ಜಲಸಮಸ್ಯೆಯ ಕಾರಣಗಳಲ್ಲಿ ಪ್ರಮುಖವಾದವು. ಕಾಸರಘಟ್ಟದ ಸುತ್ತಲಿನ ಗ್ರಾಮಸ್ಥರು ಅನುಸರಿಸುತ್ತಿರುವ ವಿಧಾನಗಳು ತುಂಬ ಸರಳ. ಅವರ ಪರಿಶ್ರಮದಿಂದಾಗಿ ಕೆರೆಕಟ್ಟೆಗಳಲ್ಲಿ, ಕೆರೆಯಲ್ಲಿ ಬೇಸಿಗೆಯಲ್ಲಿಯೂ ಸಾಕಷ್ಟು ನೀರಿದೆ, ಅಲ್ಲಿನ ಕಲ್ಯಾಣಿ ಹಾಗೂ ಬಾವಿಗಳಲ್ಲಿಯೂ ನೀರಿದೆ.

ನಮ್ಮ ನಮ್ಮ ಊರುಗಳಲ್ಲಿರುವ ಕೆರೆಗಳ ಪುನಶ್ಚೇತನ ಕಾರ್ಯದ ಜೊತೆಗೆ ಸ್ಥಳೀಯ ಪರಿಸರಕ್ಕೆ ಹೊಂದುವ ಜಲಸಂವರ್ಧನ ಕಾರ್ಯಗಳನ್ನು ಕೈಗೊಳ್ಳುವುದು ಇಂದು ಒಂದು ರೀತಿಯ ಆಂದೋಲನವಾಗಿ ನಡೆಯಬೇಕಾದ ಕೆಲಸವಾಗಿದೆ. ಏಕೆಂದರೆ ಜೀವಜಲ ಅಮೂಲ್ಯವಾದುದು.

ಸಂಪಾದಕೀಯ ಸಹಕಾರ: ಸತ್ಯನಾರಾಯಣ ಶಾನಭಾಗ್, ಶ್ರೀವತ್ಸ, ಮಂಜುನಾಥ ಭಟ್ ಎಚ್., ರಾಧಾಕೃಷ್ಣ ಹೊಳ್ಳ, ರಾಜೇಶ್ ಪದ್ಮಾರ್, ಮೊಳಹಳ್ಳಿ ಅನಿಲ್‌ಕುಮಾರ್

## ಕೂಲಿಕಾರ ಮಹಿಳೆಯ ಪುತ್ರಿಗೆ 7 ಚಿನ್ನ

ಕಲಬುರಗಿ ಜಿಲ್ಲೆಯ ಶಹಾಪುರ ತಾಲೂಕಿನ ಹಾಪಳ್ಳಿ ಎಂಬ ಕುಗ್ರಾಮದ ಹುಡುಗಿ ಗಂಗಮ್ಮ ಗುಲ್ಬರ್ಗ ವಿಶ್ವವಿದ್ಯಾಲಯದ ಘಟಿಕೋತ್ಸವದಂದು 7 ಚಿನ್ನದ ಪದಕಗಳನ್ನು ಕೊರಳಿಗೇರಿಸಿಕೊಂಡಿದ್ದಾಳೆ. ಮೊದಲೇ ಕಿತ್ತು ತಿನ್ನುವ ಬಡತನ, ಇದರ ನಡುವೆಯೇ ಗಂಗಮ್ಮ 5 ವರ್ಷದವರಿದ್ದಾಗ ಕುಟುಂಬಕ್ಕೆ ಆಧಾರದಂತಿದ್ದ ತಂದೆ ಬಸವರಾಜ ಮೃತರಾದರು. ಆಗ ತಾಯಿ ಗುಂಡಮ್ಮ ಕುಟುಂಬ ನಡೆಸುವ ಹೊಣೆ ಹೊತ್ತರು. ಬಡತನದಿಂದ ನಿರಂತರವಾಗಿ ಓದು ಮುಂದುವರಿಸಲಾಗದೆ ಡ್ರಾಪ್ ಔಟ್ ಆದರು. ಆದರೆ ಗುಂಡಮ್ಮರಿಗೆ ಮಗಳನ್ನು ಓದಿಸುವ ಆಸೆ. ಅದಕ್ಕಾಗಿ ಬಡ್ಡಿಗೆ ಹಣ ತಂದು ಮಗಳ ಓದಿಗೆ ಆಸರೆಯಾದರು. ಈ ಬಡ್ಡಿಯ ಹಣವನ್ನು ಒಟ್ಟುಗೂಡಿಸಲು ಇತರರ ಮನೆಗೆ ಕೂಲಿ ಮಾಡಲಾರಂಭಿಸಿದರು. ತಾಯಿಯ ಈ ಒದ್ದಾಟಕ್ಕೆ ಇದೀಗ ಬೆಲೆ ಬಂದಿದೆ. ಮಗಳು ಗಂಗಮ್ಮ ಗುಲ್ಬರ್ಗ ವಿವಿಯ ಎಂಎ ಕನ್ನಡದಲ್ಲಿ ಅತೀ ಹೆಚ್ಚು ಅಂಕ ಗಳಿಸಿದ್ದುದು ಮಾತ್ರವಲ್ಲದೇ 7 ಚಿನ್ನದ ಪದಕಗಳನ್ನು ಪಡೆದಿದ್ದಾಳೆ.

## 5 ಮನೆಯಲ್ಲಿ ಮುಸುರೆ ತಿಕ್ಕಿ ಪಿಯುಸಿಯಲ್ಲಿ ಶೇ. 85ರಷ್ಟು ಅಂಕ ಪಡೆದ ಶಾಲಿನಿ



ಅವಳು ಪಿಯುಸಿ ವಿಜ್ಞಾನ ವಿಭಾಗದಲ್ಲಿ ಶೇ. 84.8ರಷ್ಟು ಅಂಕ ಗಳಿಸಿದ್ದಾಳೆ. ಇನ್ನಷ್ಟು ಕಲಿಯಬೇಕೆಂಬುದು ಅವಳ ಆಸೆ. ಆದರೆ ಇಷ್ಟೊಂದು ಅಂಕ ಪಡೆದಿರುವ ಈಕೆ ಬಾತ್‌ರೂಮ್‌ಗಳನ್ನು ಶುಚಿಗೊಳಿಸುವುದು, ಪಾತ್ರೆ ತೊಳೆಯುವುದು, ಅಡುಗೆ ಮಾಡುವುದು, ದಾದಿಯ ಕೆಲಸ ಇವನ್ನೆಲ್ಲ ಮಾಡಿ ಕಾಲೇಜು ವಿದ್ಯಾಭ್ಯಾಸ ಪೂರೈಸಿದ್ದಾಳೆ. ಇವಳ ಹೆಸರು ಶಾಲಿನಿ ಎ. ; ವಯಸ್ಸು 17 ವರ್ಷ. ಅವಳ ಜೀವನದ ಕಥೆ ಮೂರುಕಾಲಿನ ಓಟದಂತಿದೆ ಎಂದರೆ ತಪ್ಪಲ್ಲ.

ಒಂದರಿಂದ 7ನೇ ತರಗತಿ ವರೆಗೆ ತಮಿಳುಮಾಧ್ಯಮದಲ್ಲಿ ಓದಿದ ಅವಳು ನಂತರ ಕನ್ನಡ ಮಾಧ್ಯಮದಲ್ಲಿ ಪ್ರೌಢಶಿಕ್ಷಣ ಮುಗಿಸಿದಳು. ಮುಂದೆ ಎಸ್‌ಜಿಪಿಟಿಎ ಕಾಲೇಜಿನ ಆಂಗ್ಲ ಮಾಧ್ಯಮದಲ್ಲಿ ಪಿಯುಸಿ ವಿಜ್ಞಾನ ಶಿಕ್ಷಣ. ಮಾಧ್ಯಮದಲ್ಲಿ ಇಂತಹ ತೊಂದರೆ ಜೊತೆಗೆ ಶಾಲಿನಿಗೆ ಮನೆಯಲ್ಲೂ ಅಂಥದ್ದೇ ಸವಾಲುಗಳಿದ್ದವು. ಶಾಲಿನಿ ಬೆಂಗಳೂರಿನ ರಾಜಾಜಿನಗರದ ಸಮೀಪದ ಮರಿಯಪ್ಪನ ಪಾಳ್ಯದ ನಿವಾಸಿ. ಕಟ್ಟಡವೊಂದರಿಂದ ಬಿದ್ದು ಪೆಟ್ಟು ಮಾಡಿಕೊಂಡ ಆಕೆಯ ತಂದೆ ದಶಕಕ್ಕೂ ಹೆಚ್ಚು ಸಮಯದಿಂದ ಹಾಸಿಗೆಯಲ್ಲೇ ಇದ್ದಾರೆ. ಪತಿಯ ಅವಘಡದ ನಂತರ ತಾಯಿ ಸಂಸಾರದ ಹೊಣೆ ಹೊತ್ತು ಹಲವು ಮನೆಗಳಲ್ಲಿ ಮನೆಗೆಲಸ ಮಾಡಿ ಶಾಲಿನಿ ಮತ್ತು ಆಕೆಯ ಸಹೋದರರನ್ನು ಪೋಷಿಸಿಕೊಂಡು ಬಂದಿದ್ದರು.

ತಾಯಿ ಹೊರಗೆ ಕೆಲಸಕ್ಕೆ ಹೋಗುವುದರಿಂದ ಶಾಲಿನಿಗೆ ಮನೆಯ ಉಸ್ತುವಾರಿ. ತಂದೆಯನ್ನು ನೋಡಿಕೊಳ್ಳುವುದು, ಅಡುಗೆ, ಕಸಮುಸುರೆಯಂತಹ ಮನೆಗೆಲಸ. ಆದರೆ ದ್ವಿತೀಯ ಪಿಯುಸಿ ಪರೀಕ್ಷೆಗೆ ಕೆಲ ತಿಂಗಳ ಹಿಂದೆ ಇನ್ನೊಂದು ಆಘಾತ ಎದುರಾಯಿತು. ಅವಳ ತಮ್ಮನಿಗೆ ಮೂರನೇ ಹಂತದ ರಕ್ತದ ಕ್ಯಾನ್ಸರ್ ಇರುವುದು ಪತ್ತೆಯಾಯಿತು. ತಮ್ಮನೊಂದಿಗೆ ಅಮ್ಮ ಆಸ್ಪತ್ರೆಯಲ್ಲಿದ್ದರು. ಶಾಲಿನಿ ಸಂಸಾರ ನಡೆಸಲು ಸುತ್ತಲಿನ ಐದಾರು ಮನೆಗಳಿಗೆ ಹೋಗಿ ಅಲ್ಲಿ ಕಸ ಗುಡಿಸಿ, ಪಾತ್ರೆ, ಬಾತ್‌ರೂಮ್, ಬಟ್ಟೆ ತೊಳೆದು, ಮನೆಕೆಲಸಗಳನ್ನು ಮುಗಿಸಿ ಕಾಲೇಜಿಗೆ ಹೋಗುತ್ತಿದ್ದಳು. ಜೊತೆಗೆ ಅಪ್ಪನನ್ನು ನೋಡಿಕೊಳ್ಳುವುದು, ಮನೆಗೆಲಸ. ಹೀಗೆ ಹೊಟ್ಟೆಪಾಡಿಗಾಗಿ ದಿನದ 24 ಗಂಟೆಯಲ್ಲಿ ಶಾಲಾಅವಧಿ, 3–4 ಗಂಟೆ ನಿದ್ರೆ ಬಿಟ್ಟರೆ ಮತ್ತೆಲ್ಲವನ್ನೂ ಮನೆಗೆಲಸದಲ್ಲಿ ತೊಡಗಿಸಿಕೊಂಡು, ಮಧ್ಯ ಮಧ್ಯ ಸಿಕ್ಕ ಬಿಡುವಿನ ಅವಧಿಯಲ್ಲೇ ಪುಸ್ತಕ ಹಿಡಿದು ಓದಿದ ಶಾಲಿನಿ ಈಗ ವಿಜ್ಞಾನ ವಿಭಾಗದಲ್ಲಿ ಶೇ. 84. 8 ಅಂಕ ಗಳಿಸಿದ್ದಾಳೆ. ಛಲವಿದ್ದರೆ ಯಾವುದನ್ನೂ ಸಾಧಿಸಬಹುದು ಎಂಬುದಕ್ಕೆ ಈಕೆಯೇ ಉದಾಹರಣೆ. ಮತ್ತು ಓದುವ ಆಸಕ್ತಿ ಇರುವ ಎಲ್ಲ ವಿದ್ಯಾರ್ಥಿಗಳಿಗೆ ಈಕೆ ಪ್ರೇರಣೆಯಾಗಿದ್ದಾಳೆ.

## ನಿತ್ಯ 7ಕಿ.ಮೀ. ನಡೆದು ಶಾಲೆಗೆ ಬಂದವ 3ನೇ ರ್‍ಯಾಂಕ್

ಬಾಗಲಕೋಟೆಯ ಜಮಖಂಡಿ ತಾಲೂಕಿನ ಅನಕ್ಷರಸ್ಥ ಬಡ ಕೂಲಿ ಕಾರ್ಮಿಕನ ಮಗ ವಿಠ್ಠಲ ಸದಾಶಿವ ಮುಧೋಳ ದ್ವಿತೀಯ ಪಿಯುಸಿ ಪರೀಕ್ಷೆಯ ಕಲಾ ವಿಭಾಗದಲ್ಲಿ ಶೇ. 96ರಷ್ಟು ಅಂಕ ಗಳಿಸಿ ರಾಜ್ಯಕ್ಕೆ 3 ರ್‍ಯಾಂಕ್ ಗಳಿಸಿದ್ದಾನೆ. ದಿನನಿತ್ಯ 7 ಕಿ.ಮೀ. ನಡೆದು ತಾಲೂಕಿನ ತುಂಗಳ ಗ್ರಾಮದ ಸರಕಾರಿ ಪದವಿಪೂರ್ವ ಶಾಲೆಗೆ ಬರುತ್ತಿದ್ದ. ಬಡತನದಿಂದ ಶುಲ್ಕ ಕಟ್ಟಲು ಕಷ್ಟವಾದುದ್ದನ್ನು ತಿಳಿದ ಕಾಲೇಜಿನ ಪ್ರಾಚಾರ್ಯರೇ ಸ್ವತಃ ಶುಲ್ಕ ಕಟ್ಟಿ ಈತನ ಓದಿಗೆ ನೆರವಾದರು. ಇದೀಗ ಆತ ತನ್ನ ಸಾಮರ್ಥ್ಯವನ್ನು ಪ್ರದರ್ಶಿಸಿ, ಕಾಲೇಜು ಹಾಗೂ ಹೆತ್ತವರಿಗೆ ಕೀರ್ತಿ ತಂದಿದ್ದಾನೆ.

## 15 ಕಿ.ಮೀ. ನಡೆದು ಶೇ. 75 ಅಂಕ ಗಳಿಸಿದ ಪವಿತ್ರಾ

ಸುಳ್ಯ ತಾಲೂಕಿನ ಬಂಟಮಲೆಯ ಕರಿಯಮಲೆ ಕಾಡಿನ ಮಧ್ಯದಲ್ಲಿ ವಾಸವಾಗಿರುವ ಲೋಕಯ್ಯ ಅವರ ಪುತ್ರಿ ಪವಿತ್ರಾ ಕಲಾ ವಿಭಾಗದಲ್ಲಿ 600ಕ್ಕೆ 450 ಅಂಕ ಪಡೆದಿದ್ದಾಳೆ. ಕಾಲೇಜಿಗೆ ಕಾಡಿನ ಮಧ್ಯೆ ನಡೆದು ಹೋಗಬೇಕಾದ ಅನಿವಾರ್ಯತೆಯಿಂದ ಪ್ರಥಮ ಪಿಯುಸಿಯಲ್ಲಿ ಅನುತ್ತೀರ್ಣಳಾದಳು. ಆದರೆ ಛಲ ಬಿಡದ ಆಕೆ ವಾರಕ್ಕೆರಡು ದಿನ ಕಾಡಿನಲ್ಲಿ 15 ಕಿ.ಮೀ. ದೂರ ನಡೆದು ಸ್ಥಳೀಯ ತರಬೇತಿ ಸಂಸ್ಥೆಯಲ್ಲಿ ತರಬೇತಿ ಪಡೆಯುತ್ತಿದ್ದಳು. ಉಳಿದ ಸಮಯವನ್ನು ಸದುಪಯೋಗಪಡಿಸಿಕೊಂಡ ಆಕೆಯ ಮನೆಯಲ್ಲಿ ವಿದ್ಯುತ್ ವ್ಯವಸ್ಥೆ ದೂರದ ಮಾತೇ ಸರಿ. ಸೀಮೆಎಣ್ಣೆ ದೀಪದಡಿ ಓದಿದ ಆಕೆ ಇದೀಗ 450 ಅಂಕಗಳಿಸಿ ಉತ್ತೀರ್ಣಳಾಗಿದ್ದಾಳೆ.

## ಕೂಲಿಕಾರರ ಮಗಳು ಕಾಲೇಜಿಗೆ ನಂಬರ್ ಒನ್

ಮೈಸೂರಿನ ನಾಚನಹಳ್ಳಿ ಪಾಳ್ಯದ ಎಂ. ರಾಧಾ ಮಹಾರಾಣಿ ಕಾಲೇಜಿನ ವಿಜ್ಞಾನ ವಿಭಾಗದ ಟಾಪರ್ ಆಗಿ ಹೊರಹೊಮ್ಮಿದ್ದಾಳೆ. ಈಕೆಯ ತಂದೆ ಮಹಾದೇವ ಹಾಗೂ ತಾಯಿ ಸಾವಿತ್ರಮ್ಮ ಇಬ್ಬರೂ ಕೂಲಿ ಕೆಲಸ ಮಾಡುತ್ತಿದ್ದರು. ಹೊಟ್ಟೆ ತುಂಬಿಸಿಕೊಳ್ಳುವ ಸಲುವಾಗಿ ಬೆಳಗ್ಗೆ ಎದ್ದು ಮನೆಯಿಂದ ಹೊರಟರೆ ಪುನಃ ಮನೆ ಸೇರುವುದು ಸಂಜೆ ಕತ್ತಲು ಮೂಡಿದ ಮೇಲೆಯೇ. ಇಂತಹ ಕುಟುಂಬದಲ್ಲಿ ಜನಿಸಿದ ರಾಧಾಗೆ ಟ್ಯೂಷನ್ ದೂರದ ಮಾತು. ಕಾಲೇಜಿನಲ್ಲಿ ಹೇಳಿಕೊಟ್ಟ ಪಾಠವನ್ನೇ ಮನನ ಮಾಡಿಕೊಂಡು ಅಧ್ಯಯನ ನಡೆಸಿದ ರಾಧಾ, ಕಂಪ್ಯೂಟರ್‌ನಲ್ಲಿ ನೂರು, ಗಣಿತದಲ್ಲಿ 96, ಭೌತಶಾಸ್ತ್ರದಲ್ಲಿ 95, ರಸಾಯನಶಾಸ್ತ್ರದಲ್ಲಿ 94 ಅಂಕ ಗಳಿಸಿ ಕಾಲೇಜಿನ ನಂಬರ್ ಒನ್ ಆಗಿ ಹೊರಹೊಮ್ಮಿದ್ದಾಳೆ.

## ಕನ್ನಡ ಮಾಧ್ಯಮದಲ್ಲಿ ಓದಿದ ಮರಗೆಲಸ–ಗಾರೆ ಕೆಲಸಗಾರನ ಪುತ್ರ ವಿಜ್ಞಾನದಲ್ಲಿ 588



ಅಪ್ಪನದು ಮರಗೆಲಸ. ತಾಯಿ ಗಾರೆ ಕೆಲಸದ ಕೂಲಿಯಾಳು. ಎಸ್‌ಎಸ್‌ಎಲ್‌ಸಿವರೆಗೆ ಕನ್ನಡ ಮಾಧ್ಯಮದಲ್ಲಿ ವಿದ್ಯಾಭ್ಯಾಸ. ಇದೀಗ ಆತ 2014–15ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ತುಮಕೂರಿನ ಪ್ರತಿಷ್ಠಿತ ಸರ್ವೋದಯ ಕಾಲೇಜಿನಲ್ಲಿ ಟಾಪರ್. ಈ ಯಶಸ್ಸಿನ ಗರಿ ಸಾಧಿಸಿದವರು ತುಮಕೂರು ತಾಲೂಕಿನ ಹಿರೇಹಳ್ಳಿ ಸಮೀಪದ ಕೋಳಿಹಳ್ಳಿಯ ಪಾಪಯ್ಯ–ಧನಲಕ್ಷ್ಮಿ ಕಾರ್ಮಿಕ ದಂಪತಿಯ ಪುತ್ರ ಕೆ.ಪಿ. ಯತೀಶ್. ನಿರಂತರ ಪರಿಶ್ರಮದಿಂದ ಪ್ರೌಢಶಾಲೆ ಕನ್ನಡ ಮಾಧ್ಯಮದಲ್ಲಿ ಪೂರೈಸಿದ್ದರೂ ವಿಜ್ಞಾನ ವಿಭಾಗದಲ್ಲಿ 600ಕ್ಕೆ 588 ಅಂಕಗಳಿಸುವ ಮೂಲಕ ಕಾಲೇಜಿನ ಟಾಪರ್ ಆಗಿ ಹೊರಹೊಮ್ಮಿದ್ದಾರೆ. ಮಾತ್ರವಲ್ಲದೆ ವಿಜ್ಞಾನ ಕಲಿಕೆಗೆ ಇಂಗ್ಲಿಷ್ ಕಲಿತಿರಬೇಕು ಎಂಬ ಮೂಢನಂಬಿಕೆಯನ್ನು ಸುಳ್ಳಾಗಿಸಿದ್ದಾರೆ. ಹಿರೇಹಳ್ಳಿ ಸಿದ್ಧಗಂಗಾ ಗ್ರಾಮಾಂತರ ಪ್ರೌಢಶಾಲೆಯಲ್ಲಿ ಕನ್ನಡ ಮಾಧ್ಯಮದಲ್ಲಿ ಎಸ್‌ಎಸ್‌ಎಲ್‌ಸಿ ಓದಿದ ಯತೀಶ್ ಸ್ವಗ್ರಾಮ ಕೋಳಿಹಳ್ಳಿಯಿಂದ ಪಂಡಿತನಹಳ್ಳಿ ಗೇಟ್‌ವರೆಗೆ ನಿತ್ಯ 3ಕಿ.ಮೀ. ನಡೆದು ಬಂದು ಬಸ್ ಹಿಡಿದು ತುಮಕೂರಿಗೆ ಬರುತ್ತಿದ್ದ. ಇಂಗ್ಲಿಷ್ ಕಷ್ಟವೆನಿಸಿದಾಗ ಕನ್ನಡದಲ್ಲಿ ಬರೆದು ಅಧ್ಯಾಪಕರ ನೆರವಿನಿಂದ ಅನುವಾದಿಸಿಕೊಂಡು ಕಲಿತ ಸಾಧಕ ಯತೀಶ್.

**ಸಾಧನೆಗೆ ಅನುಕೂಲತೆಗಳ ಅಗತ್ಯವಿಲ್ಲ. ಅಲ್ಲಿ ಬೇಕಾಗಿರುವುದು ಸಾಧಿಸುವ ಛಲ ಮತ್ತು ಪರಿಶ್ರಮ. ಇವೆರೆಡನ್ನು ದೃಢವಾಗಿ ಮೈಗೂಡಿಸಿಕೊಂಡ ಯಾವುದೇ ವ್ಯಕ್ತಿ ಅಸಾಮಾನ್ಯವಾದದ್ದನ್ನು ಸಾಧಿಸಬಹುದು – ಎಂಬುದನ್ನು ಈ ಬಾರಿಯ ಎಸ್‌ಎಸ್‌ಎಲ್‌ಸಿ, ಪಿಯುಸಿ ಮುಂತಾದ ಪರೀಕ್ಷೆಗಳಲ್ಲಿ ಉತ್ತಮ ಅಂಕ ಗಳಿಸಿ ಈ ವಿದ್ಯಾರ್ಥಿಗಳು ಇನ್ನೊಮ್ಮೆ ಸಾಬೀತುಪಡಿಸಿದ್ದಾರೆ. ಅನಾನುಕೂಲತೆಗಳ ನಡುವೆಯೇ ವಿದ್ಯಾಭ್ಯಾಸ ನಡೆಸಿ ಎಲ್ಲರೂ ಮೆಚ್ಚುವಂತೆ ಅಂಕ ಗಳಿಸಿದ – ಕತ್ತಲಲ್ಲರಳಿದ – ಕೆಲವು ವಿದ್ಯಾರ್ಥಿಗಳ ಪರಿಚಯ ನಿಮಗಾಗಿ...**




## ಫೀಸು ತುಂಬಲು ಕೂಲಿ ಮಾಡಿದವಳು ರಾಜ್ಯಕ್ಕೆ ಪ್ರಥಮ



ಬಳ್ಳಾರಿಯ ಕೊಟ್ಟೂರಿನ ಸರಕಾರಿ ಪಿಯು ಕಾಲೇಜಿನ ಕಲಾ ವಿಭಾಗದ ಎಂ.ಬಿ. ನೇತ್ರಾವತಿ 579 ಅಂಕ ಗಳಿಸಿ ರಾಜ್ಯಕ್ಕೆ ಮೊದಲ ಸ್ಥಾನದಲ್ಲಿದ್ದರೆ, ಅದೇ ಕಾಲೇಜಿನ ಜೆ. ಮಾಲಿನಿ 578 ಅಂಕ ಪಡೆದು ರಾಜ್ಯಕ್ಕೆ ದ್ವಿತೀಯ ಸ್ಥಾನವನ್ನು ಪಡೆದಿದ್ದಾರೆ. ಮೂಲತಃ ದಾವಣಗೆರೆ ಜಿಲ್ಲೆಯ ಜಗಳೂರು ತಾಲೂಕಿನ ಚಿಕ್ಕಬಂಟನಹಳ್ಳಿಯವರಾದ ನೇತ್ರಾವತಿ ಬಹಳ ಕಷ್ಟಪಟ್ಟು ಈ ಸಾಧನೆ ಮಾಡಿದ್ದಾಳೆ. ಬಸವರಾಜಪ್ಪ ಹಾಗೂ ಗಿರಿಜಮ್ಮ ದಂಪತಿಗಳು ಹೊಟ್ಟೆತುಂಬಿಸಿಕೊಳ್ಳಲು ಬಳ್ಳಾರಿಗೆ ಬಂದು ನೆಲೆಸಿ ಕೃಷಿ ಚಟುವಟಿಕೆಯಲ್ಲಿ ತೊಡಗಿಸಿಕೊಂಡರು. 4 ಜನ ಮಕ್ಕಳಲ್ಲಿ ಮೂರನೆಯವಳೇ ನೇತ್ರಾವತಿ. ಒಂದರ ಮೇಲೊಂದು ಹೆಣ್ಣು ಹುಟ್ಟಿದ ಆತಂಕ, ಸಂಕಟದಲ್ಲಿ ಮಗುವನ್ನು ಯಾರಾದರೂ ಕೇಳಿದರೆ ಕೊಟ್ಟು ಬಿಡೋಣ ಎನಿಸುವಷ್ಟು ದುಃಖಿತರಾಗಿದ್ದರು, ತಂದೆತಾಯಿ. ಆದರೆ ಓದುವ ತೀವ್ರಹಂಬಲದಿಂದ ನೇತ್ರಾವತಿ ಕೂಲಿ ಮಾಡಿ ಸಂಪಾದಿಸಿ ತನ್ನ ಫೀಸು ಭರಿಸುತ್ತಿದ್ದಳು. ಇಂತಹ ಬಡತನದಲ್ಲಿ ವಿದ್ಯಾಭ್ಯಾಸ ನಡೆಸಿದ ಅವಳ ಸಾಧನೆ ಈಗ ಎಲ್ಲರಿಗೂ ಹೆಮ್ಮೆ ತರುವಂಥದ್ದು.




ಇನ್ನು ರಾಜ್ಯಕ್ಕೆ ದ್ವಿತಿಯ ಸ್ಥಾನ ಪಡೆದಿರುವ ಮಾಲಿನಿಯೂ ಸಾಮಾನ್ಯ ಕುಟುಂಬಕ್ಕೆ ಸೇರಿದವಳು. ಬಳ್ಳಾರಿಯ ಯರ್ರಮ್ಮನಹಳ್ಳಿ ಗ್ರಾಮದಿಂದ 4 ಕಿ.ಮೀ. ನಿಂಬಳಗೇರೆಗೆ ಕಾಲ್ನಡಿಗೆಯಲ್ಲೇ ಬಂದು ಅಲ್ಲಿ ಬಸ್ ಹಿಡಿದು ಕೊಟ್ಟೂರಿಗೆ ಬರಬೇಕು. ಈ ದಿನಚರಿಯ ಜೊತೆ ತಂದೆತಾಯಿಯರಿಗೆ ಸಹಾಯ ಮಾಡುತ್ತಾ ಓದಿದ ಮಾಲಿನಿ 578 ಅಂಕ ಪಡೆದು ರಾಜ್ಯಕ್ಕೆ 2 ನೆಯವಳಾಗಿ ಹೊರಹೊಮ್ಮಿದ್ದಾಳೆ.

## ಕಡು ಬಡತನದ ವಿದ್ಯಾರ್ಥಿ ವಿಠ್ಠಲಗೆ 97 ಅಂಕ

ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲೂಕಿನ ನಾಗನೂರ ಎಂಬ ಕುಗ್ರಾಮದ ವಿಠ್ಠಲ ಮಹಾದೇವಪ್ಪ ಕಬಾಡ ಬಡತನದಲ್ಲಿಯೇ ಪಿಯುಸಿ ದ್ವಿತೀಯ ವರ್ಷದ ಪರೀಕ್ಷೆಯಲ್ಲಿ ವಿಜ್ಞಾನ ವಿಭಾಗದಲ್ಲಿ ಶೇ.97.33 ಅಂಕ ಪಡೆದು ಸಾಧನೆ ಮಾಡಿದ್ದಾನೆ.

ತಂದೆ ಮಹಾದೇವಪ್ಪ, ತಾಯಿ ಬಸಲಿಂಗಮ್ಮ ಇಬ್ಬರೂ ಅನಕ್ಷರಸ್ಥರು. ಇವರಿಗೆ ಇಬ್ಬರು ಗಂಡು ಮಕ್ಕಳು, ಮೂವರು ಹೆಣ್ಣುಮಕ್ಕಳಿದ್ದಾರೆ. ನಾವು ಕಲಿತಿಲ್ಲ ನಮ್ಮ ಮಕ್ಕಳಾದರೂ ಶಾಲೆ ಕಲಿಯಲಿ ಎಂದು ತಮ್ಮ ಬಡತನದಲ್ಲಿಯೇ ಮಕ್ಕಳನ್ನು ಶಾಲೆಗೆ ಕಳಿಸಿದ್ದರು. ತಂದೆತಾಯಂದಿರ ಕಷ್ಟಕ್ಕೆ ಪರಿಹಾರ ಹುಡುಕಲು ತಾನು ಚೆನ್ನಾಗಿ ಓದಬೇಕೆಂದು ನಿಶ್ಚಯಿಸಿದ ವಿಠ್ಠಲ ನಿರಂತರ ಅಭ್ಯಾವನ್ನು ರೂಢಿಸಿಕೊಂಡ. ಸ್ವಗ್ರಾಮದಿಂದ 4 ಕೀ.ಮಿ. ದೂರದಲ್ಲಿರುವ ಸಾಲಾಪುರ ಸರಕಾರಿ ಪ್ರಾಥಮಿಕ ಶಾಲೆಗೆ ಪ್ರತಿದಿನ ನಡೆದುಕೊಂಡು ಹೋಗಿ 1 ರಿಂದ 5ನೇ ತರಗತಿ ವರೆಗೆ ವಿದ್ಯಾರ್ಜನೆ ಮಾಡಿದ್ದಾನೆ. ನಂತರ ರಾಮದುರ್ಗದ ಪ್ರಗತಿ ವಿದ್ಯಾಲಯದಲ್ಲಿ 6 ರಿಂದ 10ನೇ ತರಗತಿ ವರೆಗೆ ನಗರದ ಬಿಸಿಎಂ ಹಾಸ್ಟೆಲ್‌ನಲ್ಲಿದ್ದುಕೊಂಡು ಕಲಿತ ಈತ, ಎಸ್‌ಎಸ್‌ಎಲ್‌ಸಿಯಲ್ಲಿ ಶೇ. 94.72 ರಷ್ಟು ಅಂಕ (600ಕ್ಕೆ 584 ಅಂಕ) ಪಡೆದು ಬಿಸಿಎಂ ಹಾಸ್ಟೆಲ್‌ನಲ್ಲಿ ಓದಿದ ವಿದ್ಯಾರ್ಥಿಗಳಲ್ಲಿ ರಾಜ್ಯಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದು ಹೆಗ್ಗಳಿಕೆ ಇವನದಾಗಿದೆ. ಮೆರಿಟ್ ಆಧಾರದಲ್ಲಿ ಧಾರವಾಡದ ಜೆಎಸ್‌ಎಸ್ ಕಾಲೇಜಿನ ಪಿಯುಸಿ ವಿಜ್ಞಾನ ವಿಭಾಗದಲ್ಲಿ ಪ್ರವೇಶ ಪಡೆದಿದ್ದ. 8ನೇ ತರಗತಿಯಲ್ಲಿದ್ದಾಗ ಎನ್‌ಎಂಎಂಎಸ್ ಪರೀಕ್ಷೆಯಲ್ಲಿ ಪಾಸಾಗಿದ್ದರಿಂದ ಪ್ರತಿ ತಿಂಗಳು ಬರುತ್ತಿದ್ದ 500 ರೂ ಶಿಷ್ಯವೇತನವನ್ನು ಕೂಡಿಟ್ಟುಕೊಂಡು ಕಷ್ಟದಲ್ಲಿಯೇ ವಿದ್ಯಾರ್ಜನೆ ಮಾಡಿ ಈ ಸಾಧನೆ ಮಾಡಿದ್ದಾರೆ.




ಸರ್ಕಾರಿ ಶಾಲೆ/ಕಾಲೇಜುಗಳಲ್ಲಿ ಗುಣಮಟ್ಟ ಸರಿಯಿಲ್ಲ. ಖಾಸಗಿ ಶಾಲೆ/ಕಾಲೇಜುಗಳೇ ಶ್ರೇಷ್ಠ ಎನ್ನುವವರು ಪಿಯುಸಿ ಫಲಿತಾಂಶವನ್ನೊಮ್ಮೆ ನೋಡಿ.

पुंगव PUNGAVA
# 74, Ranga Rao Road,
Shankarapuram, Bangalore - 560 004.
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

REGISTERED NEWS PAPER RNI 36528/79 LICENCED TO POST WITHOUT PREPAYMENT-WPP46 AT PSO BENGALURU-560 026 on 10/25 of every Month REG.NO.CPMG/KA/BGS/102/2015-17
1-6-2015



# ಸ್ವದೇಶಿಭಂಡಾರ – ಹೀಗೊಂದು ಯಶಸ್ವೀ ಪ್ರಯೋಗ

**ಮೇ 1ರಂದು ಪುಂಗವದಲ್ಲಿ ಪ್ರಕಟವಾದ "ಸ್ವದೇಶಿಭಂಡಾರ – ಹೀಗೊಂದು ಸಾಧ್ಯತೆ" ಎಂಬ ಲೇಖನಕ್ಕೆ ರಾಜ್ಯದೆಲ್ಲೆಡೆಯಿಂದ ಭಾರಿ ಪ್ರತಿಕ್ರಿಯೆಗಳು ಬರುತ್ತಿವೆ. ಅನೇಕರು ತಾವೊಂದು ಸ್ವದೇಶಿಅಂಗಡಿ ತೆರೆಯಲು ಮುಂದೆ ಬಂದಿದ್ದಾರೆ. ಇನ್ನೂ ಅನೇಕರು ತಮ್ಮ ಸ್ವದೇಶೀ ಭಂಡಾರದ ಅನುಭವಗಳನ್ನು ಹಂಚಿಕೊಂಡಿದ್ದಾರೆ. ಅವುಗಳಲ್ಲೊಂದನ್ನು ಓದುಗರಿಗಾಗಿ ಇಲ್ಲಿ ಹಂಚಿಕೊಳ್ಳಲಾಗಿದೆ.**

**ಷೋಕೇಸಿನಲ್ಲೊಂದು ಸ್ವದೇಶಿ ವಸ್ತು ಭಂಡಾರ :** ಸ್ವದೇಶಿ ವಸ್ತುಗಳ ಬಳಕೆಯನ್ನು ಪ್ರೋತ್ಸಾಹಿಸಿ ಮಾರಾಟ ಮಾಡಲು ಜನನಿಬಿಡ ಮಾರುಕಟ್ಟೆಯಲ್ಲಿ ಅಂಗಡಿಯೇ ಬೇಕೆಂದಿಲ್ಲ. ಮನೆಯ ಷೋಕೇಸ್ ಕೂಡಾ ಸಾಕು. ಹೀಗೊಂದು ಯಶಸ್ವಿ ಪ್ರಯೋಗ ಮಾಡಿದವರು ನೆಲಮಂಗಲದ ನಿವಾಸಿ ಗಂಗಾಧರ ಅವರು. ಅವರು ಮನೆಯಲ್ಲೇ ಮಾಸಿಕ ಹದಿನೈದರಿಂದ ಇಪ್ಪತ್ತು ಸಾವಿರ ರೂಪಾಯಿ ಮೌಲ್ಯದ ಸ್ವದೇಶಿ ವಸ್ತುಗಳನ್ನು ವ್ಯಾಪಾರ ಮಾಡುತ್ತಾರೆ.

ಸ್ವಂತದ ಬಳಕೆಗೆಂದು ತಂದ ಸಾಮಾನುಗಳನ್ನು ಷೋಕೇಸಿನಲ್ಲಿ ಇಟ್ಟಿದ್ದರು. ಮನೆಗೆ ಬಂದವರು ಸಾಮಾನುಗಳು ಷೋಕೇಸ್‌ನಲ್ಲಿರುವುದನ್ನು ನೋಡಿ ಅವುಗಳ ಕುರಿತು ವಿಚಾರಿಸಲಾರಂಭಿಸಿದರು. ಅವುಗಳ ಬಗೆಗೆ ತಿಳಿದುಕೊಳ್ಳುತ್ತಾ ಮನೆಗೆ ಬಂದ ಒಬ್ಬೊಬ್ಬರೇ ಅದನ್ನು ಕೊಂಡುಕೊಳ್ಳಲಾರಂಭಿಸಿದರು. ಇಂದು ಅವರ ಮನೆಯೇ ಸ್ವದೇಶೀ ವಸ್ತುಗಳ ಮಾರಾಟ ಕೇಂದ್ರವಾಗಿ ಪರಿವರ್ತಿತವಾಗಿದೆ. ಪತಂಜಲಿ ಆಯುರ್ವೇದ, ನಂಜನಗೂಡಿನ ಸುರುಚಿ, ರಾಮಚಂದ್ರಾಪುರ ಮಠದ ಗೋಉತ್ಪನ್ನಗಳು, ಸ್ಥಳೀಯ ಸ್ವದೇಶಿ ಗೃಹಬಳಕೆಯ ವಸ್ತುಗಳು, ಸೌಂದರ್ಯವರ್ಧಕಗಳು, ಆಯುರ್ವೇದ ಔಷಧಗಳು ಗಂಗಾಧರ್ ಅವರ ಮನೆಯ ಷೋಕೇಸನ್ನು ಅಲಂಕರಿಸಿವೆ. ಹೀಗೆ ಪ್ರಾರಂಭವಾದ ಗಂಗಾಧರ ಅವರ ಪ್ರಯತ್ನ ಇನ್ನೂ ಅನೇಕರಿಗೆ ಪ್ರೇರಣೆ ನೀಡಿದೆ.

ಇದು ಕಡಿಮೆಬಂಡವಾಳ ಹಾಗೂ ಸರಳರೂಪದಲ್ಲಿ ಮಾಡಬಹುದಾದ ಒಂದು ಯಶಸ್ವಿ ಪ್ರಯೋಗವಾಗಿದೆ. ಸ್ವದೇಶೀವಸ್ತುಗಳ ಹಾಗೂ ಸ್ವದೇಶೀತನದ ಬಗೆಗೆ ಕಾಳಜಿ ಇರುವ ಅನೇಕರಿಗೆ ಇದು ಪ್ರೇರಣೆಯಾಗಿದೆ. ಈ ನಿಮಿತ್ತ ಮನೆ-ಮನೆಯಲ್ಲಿ ಸ್ವದೇಶೀವಸ್ತುಗಳ ಹಾಗೂ ಸ್ವದೇಶೀ ವಿಚಾರದ ಕುರಿತು ಚರ್ಚೆ ನಡೆಯುವುದರಿಂದ ಸ್ವದೇಶಿ ಹಾಗೂ ಸಾವಯವ ವಸ್ತುಗಳ ಬಳಕೆ, ಅದರ ಆರ್ಥಿಕ ಹಾಗೂ ಆರೋಗ್ಯದ ಪರಿಣಾಮಗಳು, ಭಾರತೀಯ ಜೀವನಶೈಲಿ ಮೊದಲಾದ ವಿಷಯಗಳ ಪ್ರಚಾರಕ್ಕೂ ಇದು ಸಹಕಾರಿಯಾಗಿದೆ.

**ನಿಮಗೂ ಸ್ವದೇಶಿಭಂಡಾರ ತೆರೆಯಲು ಆಸಕ್ತಿ ಇದೆಯೇ?**
**ಹಾಗಾದರೆ, ಸಂಪರ್ಕಿಸಿ: 99007 33556 (ಜಗದೀಶ್).**



## ಆರೆಸ್ಸೆಸ್ ಪ್ರಾರ್ಥನೆಗೆ 75 ವರ್ಷ

ರಾಷ್ಟ್ರೀಯ ಸ್ವಯಂಸೇವಕ ಸಂಘದ ಅವಿಭಾಜ್ಯ ಅಂಗ ವ್ಯಕ್ತಿನಿರ್ಮಾಣ ಮಾಡುವ "ಶಾಖೆ". ಈ ಶಾಖೆಯ ಪ್ರಮುಖ ಭಾಗ ಭಾರತಮಾತೆಯನ್ನು ಕುರಿತ ಪ್ರಾರ್ಥನೆ 'ನಮಸ್ತೇ ಸದಾ ವತ್ಸಲೆ...'. ಆರೆಸ್ಸೆಸ್‌ನ ಪ್ರತಿ ಕಾರ್ಯಕ್ರಮದಲ್ಲೂ ಕಡ್ಡಾಯವಾಗಿ ಹಾಡುವ ಈ ಪ್ರಾರ್ಥನಾ ಗೀತೆಗೆ 2015ರ ಮೇ 18ಕ್ಕೆ 75 ವರ್ಷ ತುಂಬಿದೆ. 1940ರ ಮೇ 18ರಂದು ನಾಗಪುರದಲ್ಲಿ ನಡೆದ ಸಂಘ ಶಿಕ್ಷಾ ವರ್ಗದಲ್ಲಿ ಆರೆಸ್ಸೆಸ್‌ನ ಪ್ರಚಾರಕರಾಗಿದ್ದ ಯಾದವರಾವ್ ಜೋಷಿ ಅವರು ಮೊದಲ ಬಾರಿಗೆ ಸಾರ್ವಜನಿಕವಾಗಿ ಹಾಡಿದ್ದರು. ಇದೇ ಅವಧಿಯಲ್ಲಿ ಪುಣೆಯಲ್ಲಿ ನಡೆದ ಮತ್ತೊಂದು ಸಂಘ ಶಿಕ್ಷಾ ವರ್ಗದಲ್ಲಿ ಅನಂತರಾವ್ ಕಾಳೆ ಈ ಪ್ರಾರ್ಥನೆಯನ್ನು ಹಾಡಿದ್ದರು. ಸಂಪೂರ್ಣ ಪ್ರಾರ್ಥನೆಯು ಸಂಸ್ಕೃತ ಭಾಷೆಯಲ್ಲಿದ್ದು, ಕೊನೆಯ ಶ್ಲೋಕ 'ಭಾರತ್ ಮಾತಾ ಕೀ ಜೈ' ಹಿಂದಿ ಭಾಷೆಯಲ್ಲಿದೆ. ಆರೆಸ್ಸೆಸ್‌ನ ಸಂಸ್ಥಾಪಕ ಕೇಶವ ಬಲಿರಾಮ್ ಹೆಡಗೇವಾರ್ ಮತ್ತು ಆರೆಸ್ಸೆಸ್‌ನ ಎರಡನೇ ಸರಸಂಘಚಾಲಕ ಮಾಧವ ಸದಾಶಿವರಾವ್ ಗೋಳವಲಕರ್ ಸಲಹೆ ಮೇರೆಗೆ ಸಂಸ್ಕೃತ ಪ್ರೊಫೇಸರ್ ನರಹರಿ ನಾರಾಯಣ್ ಬಿಢೆ ಪ್ರಾರ್ಥನೆಯನ್ನು ರಚಿಸಿದ್ದರು.



## ಶೌಚಾಲಯಕ್ಕೆ ಪಟ್ಟು ಯುವತಿಗೆ ಬಹುಮಾನ

ಮದುವೆಯ ವೇಳೆ ತವರು ಮನೆಯವರ ಉಡುಗೊರೆಗಳ ಬದಲು ಪತಿಮನೆಯಲ್ಲಿ ಶೌಚಾಲಯ ನಿರ್ಮಾಣಕ್ಕೆ ಆದ್ಯತೆ ನೀಡಿದ್ದ ಮಹಾರಾಷ್ಟ್ರದ ಯುವತಿಗೆ ಸ್ಥಳೀಯ ಎನ್‌ಜಿಒ ಒಂದು 10 ಲಕ್ಷದ ನಗದು ಇನಾಮು ಪ್ರಕಟಿಸಿದೆ. ನರೇಂದ್ರ ಮೋದಿ ಅವರ 'ಸ್ವಚ್ಛ ಭಾರತ ಅಭಿಯಾನ'ದಿಂದ ಪ್ರಭಾವಿತಳಾಗಿದ್ದ ಅಕೋಲಾ ಜಿಲ್ಲೆಯ ವಧು ಚೈತಾಲಿ ಗಲಖೆ, ತನ್ನ ಮದುವೆಗೆ ತವರು ಮನೆಯವರು ನೀಡುವ ಉಡುಗೊರೆಗಳಿಗಿಂತ ಪತಿಯ ಮನೆಯಲ್ಲಿ ಶೌಚಾಲಯ ನಿರ್ಮಿಸುವುದು ದೊಡ್ಡ ಉಡುಗೊರೆ ಎಂದು ಪಟ್ಟುಹಿಡಿದು ಅದನ್ನು ಸಾಧಿಸುವಲ್ಲಿ ಯಶಸ್ವಿಯಾಗಿದ್ದಳು. ಆಕೆಯ ದಿಟ್ಟ ಹೆಜ್ಜೆಯನ್ನು ಪ್ರಶಂಸಿಸಿರುವ ಜಿಲ್ಲೆಯ ಸುಲಭ್ ಇಂಟರ್‌ನ್ಯಾಷನಲ್ ಆಕೆಗೆ 10 ಲಕ್ಷದ ಬಹುಮಾನವನ್ನು ಘೋಷಿಸಿದೆ. ಚೈತಾಲಿ, ಶೌಚಾಲಯ ಕುರಿತು ಸಂದೇಶಗಾತಿ ಮತ್ತು ಇತರರಿಗೆ ಸ್ಫೂರ್ತಿ ಎಂದು ಸುಲಭ್ ಇಂಟರ್‌ನ್ಯಾಷನಲ್‌ನ ಬಿಂದೇಶ್ವರ್ ಪಾಠಕ್ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಅಕೋಲ ನಿವಾಸಿ ಚೈತಾಲಿ ಡಿ. ಅಲಖೆ ಅವರ ವಿವಾಹ ಯವತ್ಮಲ್‌ನ ದೇವೇಂದ್ರ ಮಖೋಡೆ ಎಂಬವರೊಂದಿಗೆ ಕೆಲವು ವಾರಗಳ ಹಿಂದೆ ನಿಗದಿಯಾಗಿತ್ತು. ಆಗ ಚೈತಾಲಿ ಅವರಿಗೆ ಪತಿಯ ಮನೆಯಲ್ಲಿ ಶೌಚಾಲಯ ಇಲ್ಲ. ಎಲ್ಲರೂ ಬಯಲು ಶೌಚಕ್ಕೆ ಹೋಗುತ್ತಾರೆ ಎಂಬುದು ಗಮನಕ್ಕೆ ಬಂದಿತ್ತು. ಬಳಿಕ ತಮ್ಮ ಪೋಷಕರೊಂದಿಗೆ ಚರ್ಚೆನಡೆಸಿ ಮದುವೆ ಉಡುಗೊರೆಯಾಗಿ ಶೌಚಾಲಯ ವ್ಯವಸ್ಥೆ ಮಾಡುವಂತೆ ವಿನಂತಿಸಿದ್ದರು. ಚೈತಾಲಿ ಅವರ ತಂದೆ ದಿಲೀಪ್ ಗಲಖೆ ಅವರಿಗೆ ಆರಂಭದಲ್ಲಿ ಮಗಳ ಬೇಡಿಕೆ 'ಅಸಂಬದ್ಧ' ಎಂದು ಅನಿಸಿದರೂ ಆಕೆಯ ಬೇಡಿಕೆಯನ್ನು ಈಡೇರಿಸುವ ಸಲುವಾಗಿ ಸುಮಾರು 18 ಸಾವಿರ ವೆಚ್ಚದಲ್ಲಿ ಸ್ಥಳೀಯ ತಯಾರಕರಿಂದ ಸಿದ್ಧವಾದ ಶೌಚಾಲಯವನ್ನು ಉಡುಗೊರೆ ನೀಡಿದರು.

## ಭಾರತದ ಶಾಂತಿ ಪಾಲನಾ ಪಡೆಗೆ ವಿಶ್ವಸಂಸ್ಥೆ ಗೌರವ

ವಿಶ್ವಸಂಸ್ಥೆಯ ಶಾಂತಿಪಾಲನಾ ಕಾರ್ಯಾಚರಣೆಯಲ್ಲಿ ನೀಡಿರುವ ಗಮನಾರ್ಹ ಕೊಡುಗೆಯನ್ನು ಪರಿಗಣಿಸಿ ವಿಶ್ವಸಂಸ್ಥೆ ಭಾರತೀಯ ಪಡೆಗೆ ಪ್ರಶಸ್ತಿ ನೀಡಿ ಗೌರವಿಸಿದೆ. ಶಾಂತಿಪಾಲನಾ ಕಾರ್ಯಾಚರಣೆಗಳಲ್ಲಿ ಸುಮಾರು 1.80 ಲಕ್ಷ ಪಡೆಗಳನ್ನು ನೀಡಿದೆ, ಯಾವುದೇ ದೇಶವೂ ಇಷ್ಟು ಪ್ರಮಾಣದ ಪಡೆಗಳನ್ನು ನೀಡಿಲ್ಲ. ಈ ಮೂಲಕ ಜಾಗತಿಕ ಶಾಂತಿ ಮತ್ತು ಸ್ಥಿರತೆಗೆ ಭಾರತ ಗಮನಾರ್ಹ ಕೊಡುಗೆ ನೀಡಿದೆ. ಅಲ್ಲದೇ ವಿಶ್ವಸಂಸ್ಥೆ ಕೈಗೊಂಡ 69 ಕಾರ್ಯಾಚರಣೆಯಲ್ಲಿ 44 ಕಾರ್ಯಾಚರಣೆಯಲ್ಲಿ ಭಾರತೀಯ ಪಡೆ ಭಾಗವಹಿಸಿದೆ. ಈ ಕಾರ್ಯಾಚರಣೆಯ ವೇಳೆ 158 ಭಾರತೀಯ ಶಾಂತಿ ಪಾಲಕರು ಹತರಾಗಿದ್ದಾರೆ. ಇತ್ತೀಚೆಗೆ ಅಮೆರಿಕ ಹಾಗೂ ಭಾರತದ ವಾಣಿಜ್ಯ ಮಂಡಳಿ ಸಹಯೋಗದಲ್ಲಿ ನಡೆದ ಸಮಾರಂಭದಲ್ಲಿ ಭಾರತದ ವಿಶ್ವಸಂಸ್ಥೆ ರಾಯಭಾರಿ ಅರುಣ್ ಕೆ. ಸಿಂಗ್ ಪ್ರಶಸ್ತಿ ಸ್ವೀಕರಿಸಿದರು.

## ಮೂಡುಬಿದಿರೆಯಲ್ಲಿ ವಿಹಿಂಪ ಶಿಕ್ಷಾ ವರ್ಗ

ದಕ್ಷಿಣ ಕನ್ನಡ ಜಿಲ್ಲೆಯ ಮೂಡುಬಿದಿರೆ ಸಮೀಪದ ಪುತ್ತಿಗೆಯಲ್ಲಿ ವಿಶ್ವ ಹಿಂದು ಪರಿಷತ್‌ನ ರಾಜ್ಯಮಟ್ಟದ 10 ದಿನಗಳ ಪರಿಷದ್ ಶಿಕ್ಷಾ ವರ್ಗ ಮೇ 7ರಂದು ಪ್ರಾರಂಭವಾಯಿತು. ಕರ್ನಾಟಕ ರಾಜ್ಯದ ವಿವಿದೆಡೆಗಳಿಂದ ವಿಶ್ವ ಹಿಂದು ಪರಿಷತ್‌ನ 145, ಭಜರಂಗದಳದ 248 ಹಾಗೂ ಮಹಿಳೆಯರಿಗಾಗಿ ಇರುವ ದುರ್ಗಾವಾಹಿನಿಯ 35 ಮಂದಿ ವರ್ಗದಲ್ಲಿ ಭಾಗವಹಿಸಿದ್ದರು. ಸಮಾಜದಲ್ಲಿನ ಉಗ್ರವಾದ, ಅಕ್ರಮ ನುಸುಳುಕೋರರು, ಮತಾಂತರ, ಲವ್‌ಜಿಹಾದ್, ಅಲ್ಪಸಂಖ್ಯಾತ ಮುಸ್ಲಿಮರ ಜನಸಂಖ್ಯಾ ವೃದ್ಧಿಯಂತಹ ಗಂಭೀರ ಸಮಸ್ಯೆಗಳಿಂದ ವಿಹಿಂಪ ಬಗೆಗೆ ಸಮಾಜದಲ್ಲಿ ಹೆಚ್ಚಿದ ನಿರೀಕ್ಷೆ ಹಾಗೂ ಸತ್ಸಂಗ, ಸಂಪರ್ಕ, ಸಂವರ್ಧನೆಯ ಮೂಲಕ ವಿಹಿಂಪನ್ನು ಗ್ರಾಮಾಂತರ ಮಟ್ಟದಲ್ಲಿ ಸಾಮಾಜಿಕ ಸಂಘಟನೆಯಾಗಿ ಗಟ್ಟಿಗೊಳಿಸುವ ಅಗತ್ಯತೆ ಮುಂತಾದವುಗಳ ಕುರಿತು ಚರ್ಚೆ ನಡೆಸಲಾಯಿತು. ಶಿಬಿರದಲ್ಲಿ ಮೂಡುಬಿದರೆಯ ಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ, ಆರೆಸ್ಸೆಸ್‌ನ ಪ್ರಾಂತ ಪ್ರಚಾರಕ ಸುಧೀರ್, ದಕ್ಷಿಣ ಮಧ್ಯ ಕ್ಷೇತ್ರೀಯ ಕಾರ್ಯಕಾರಿಣಿ ಸದಸ್ಯ ಡಾ. ಕಲ್ಲಡ್ಕ ಪ್ರಭಾಕರ್ ಭಟ್, ವಿಹಿಂಪನ ಗೋಪಾಲ್, ಟಿಎಪಿ ಶೆಣೈ ಮುಂತಾದವರು ಆಗಮಿಸಿ ಮಾರ್ಗದರ್ಶನ ಮಾಡಿದರು.




ಸಂಪಾದಕ-ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು-04. ಸಂಪಾದಕೀಯ : 9731264009 ಪ್ರಸರಣ: 97391 83021 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು-19